ಅ) ಪ್ರಸಕ್ತ ನೀತಿಯನ್ವಯ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗುವಂತೆ ಸಹಾಯಧನ, ಭೂ ಪರಿವರ್ತನೆ ಶುಲ್ಕ ಮನ್ನಾ ಮಾಡುವುದು, ಸ್ಟಾಂಪ್ ಡ್ಯೂಟಿ ಶುಲ್ಕ ವಿನಾಯಿತಿ, ಐ.ಎಸ್.ಒ.9000 ಪ್ರಮಾಣ ಪತ್ರ ಪಡೆಯುವ ಕೈಗಾರಿಕೆಗಳಿಗೆ ರೂ 7500 ಗರಿಷ್ಟ ಮಿತಿಗೊಳಪಟ್ಟು ಪ್ರೋತ್ಸಾಹಧನ, ಗೃಹೋಪಯೋಗಿ ವಿದ್ಯುತ್ ಉಪಕರಣಗಳ ಗುಣಮಟ್ಟ ಕಾಯಿದೆ ಅನ್ವಯ ಐ.ಎಸ್.ಐ. ಪ್ರಮಾಣ ಪತ್ರ ಪಡೆದ ಘಟಕಗಳಿಗೆ ರೂ. 30,000ಗಳ ಗರಿಷ್ಟ ಪ್ರೋತ್ಸಾಹಧನ ಇತ್ಯಾದಿಗಳನ್ನು ನೀಡಲಾಗುತ್ತಿದೆ.

ಅತಿ ಸಣ್ಣ ಕೈಗಾರಿಕೆಗಳಿಗೆ (ಅಂದರೆ ಯಂತ್ರೋಪಕರಣದ ಮೇಲೆ ರೂ. 25.00 ಲಕ್ಷಕ್ಕಿಂತ ಕಡಿಮೆ ಬಂಡವಾಳ ಹೂಡಿರುವ ಕೈಗಾರಿಕೆಗಳು) ರಾಜ್ಯ ಸಹಾಯಧನವನ್ನು ಪಡಿಯಲು ಈ ಕೆಳಕಂಡಂತೆ ಅರ್ಹವಿರುತ್ತವೆ.

ವಲಯ-1ರಲ್ಲಿ ಅಂದರೆ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ನಾವು ಸ್ಥಾಪಿಸಲಾಗುವ ಸಿದ್ಧ ಉಡುಪು, ಪ್ರಿಶಿಷನ್ ಟೂಲಿಂಗ್ ಎಲೆಕ್ಟ್ರಾನಿಕ್ ಚರ್ಮದ ಉಡುಪು ಇನ್‌ಫಾರ್ಮೆಟಿಕ್ಸ್ ಕೈಗಾರಿಕೆಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇ. 2ರಷ್ಟು ಸಹಾಯಧನ ರೂ. 40.00 ಲಕ್ಷ ಗರಿಷ್ಟ ಮಿತಿಗೊಳಪಟ್ಟು ನೀಡಲಾಗುವುದು.

ವಲಯ-2ರಲ್ಲಿ ಅಂದರೆ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳ ಬಂಡವಾಳ ಹೂಡಿಕೆ ಮೇಲೆ ಶೇ. 25ರಷ್ಟು ಸಹಾಯಧನ ರೂ. 10.00 ಲಕ್ಷ ಗರಿಷ್ಟ ಮಿತಿಗೊಳಪಟ್ಟು ನೀಡಲಾಗುವುದು. ಎಸಿ : ಎಸ್‌ಟಿ, ಮಹಿಳೆಯರು, ಅಲ್ಪ ಸಂಖ್ಯಾತ ವರ್ಗದ ಉದ್ದಿಮೆದಾರರಿಗೆ ಶೇ.5ರಷ್ಟು ಗರಿಷ್ಟ ರೂ. 1.00 ಲಕ್ಷ ಹೆಚ್ಚುವರಿ ಸಹಾಯಧನ ನೀಡಲಾಗುವುದು.

ವಲಯ 3ರಲ್ಲಿ ಅಂದರೆ ಗುರುತಿಸಿರುವ ಅಭಿವೃದ್ಧಿ ಕೇಂದ್ರಗಳಲ್ಲಿ ಬಂಡವಾಳ ಹೂಡಿಕೆ ಮೇಲೆ ಶೇ. 25+5 ಪ್ರೋತ್ಸಾಹಧನ ಗರಿಷ್ಟ ರೂ. 12.00 ಲಕ್ಷ ಮಿತಿಗೊಳಪಟ್ಟು ನೀಡಲಾಗುವುದು.

ರೋಗಗ್ರಸ್ಥ ಕೈಗಾರಿಕೆಗಳಿಗೆ ಯೋಜನಾ ವೆಚ್ಚದ ಶೇ.25ರಷ್ಟು ಗರಿಷ್ಟ 2.50 ಲಕ್ಷಗಳಿಗೆ ಮೀರದಂತೆ ಬಡ್ಡಿರಹಿತ ಬೀಜಧನ ಸಾಲ, ಮಾರಾಟ ತೆರಿಗೆ ಬಾಕಿಯನ್ನು ಪಾವತಿಸುವ ಬಗ್ಗೆ ಅವಧಿ ಮುಂದೂಡಿಕೆ, ವಿದ್ಯುತ್ ಶುಲ್ಕ ಪಾವತಿ ಬಗ್ಗೆ ರಿಯಾಯಿತಿ, ಅಭಿವೃದ್ಧಿ ಸಾಲ ಬಾಕಿ ಪಾವತಿ ಬಗ್ಗೆ ಅವಧಿ ಮುಂದೂಡಿಕೆ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ.

ರಾಜ್ಯದ ನಗರಸಭೆ ಮತ್ತು ಪುರಸಭೆಗಳ ಆರ್ಥಿಕ ಪರಿಸ್ಥಿತಿ.

3345 (4391) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಬಹುತೇಕ ಪುರಸಭೆ ಹಾಗೂ ನಗರಸಭೆಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ್ದರಿಂದ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಸ್ವಮಸ್ಥಿತವಾಗಿ ತೆಗೆದುಕೊಳ್ಳಲಾಗದ ಪರಿಸ್ಥಿತಿಯಲ್ಲಿ ನಗರಸಭೆ ಹಾಗೂ ಪುರಸಭೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದಾಗಿ ಹೆಚ್ಚು ಅಂಶದ ನಗರಸಭೆ ಹಾಗೂ ಪುರಸಭೆಗಳು ತಮ್ಮ ವ್ಯಾಪ್ತಿಯಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸರ್ಕಾರ ನಗರಸಭೆ ಹಾಗೂ ಪುರಸಭೆಗಳಿಗೆ ತಾನು ನೀಡುವ ಅನುದಾನದ ಹೊರತಾಗಿ ಈ ಸಂಸ್ಥೆಗಳ ಹಣಕಾಸಿನ ಪರಿಸ್ಥಿತಿ ಸುಧಾರಿಸಲು ವಿಶೇಷ ಕ್ರಮಗಳನ್ನೇನಾದರೂ ಸರ್ಕಾರವು ಯೋಚಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ಕೆಲವೊಂದು ಪುರಸಭೆ ಹಾಗೂ ನಗರಸಭೆಗಳನ್ನು ಹೊರತುಪಡಿಸಿ ರಾಜ್ಯದ ಬಹುತೇಕ ಇನ್ನುಳಿದ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿದ್ದು, ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಆ) ಕೆಲವೊಂದು ಪುರಸಭೆ ಹಾಗೂ ನಗರಸಭೆಗಳನ್ನು ಹೊರತುಪಡಿಸಿ ರಾಜ್ಯದ ಇನ್ನುಳಿದ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯವನ್ನು ಕಾಪಾಡಿಕೊಳ್ಳುತ್ತಿದೆ.

ಇ) ಹೌದು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಲು ಅವುಗಳ ಆದಾಯದ ಪ್ರಮುಖ ಮೂಲವಾದ ಆಸ್ತಿ ತೆರಿಗೆಯನ್ನು ವಸೂಲಾತಿ ಮಾಡಲು ಪ್ರಸ್ತುತ ಇರುವ ಕಾಯ್ದೆಗಳಿಗೆ ತಿದ್ದುಪಡಿಯನ್ನು ತರಲಾಗುತ್ತಿದ್ದು, ಈ ಹಿಂದೆ ಆಸ್ತಿಗಳ ತೆರಿಗೆಯನ್ನು ಆಸ್ತಿಗಳ ವಾರ್ಷಿಕ ದರಗಳ ಅಥವಾ ಬಾಡಿಗೆಯ ಆಧಾರದ ಮೇಲೆ ನಿಗದಿ ಪಡಿಸುತ್ತಿದ್ದುದನ್ನು ಬದಲಾಯಿಸಿ ಆಸ್ತಿಗಳ ಸಂಪೂರ್ಣ ಬೆಲೆಯನ್ನು ಅಂದರೆ ನಿವೇಶನ ಅಥವಾ ಕಟ್ಟಡ ಇರುವ ಸ್ಥಳ, ಕಟ್ಟಡವನ್ನು ಕಟ್ಟಿದ ರೀತಿ, ಕಟ್ಟಡದ ಉಪಯೋಗ, ಇತ್ಯಾದಿಗಳನ್ನು ಪರಿಗಣಿಸಿ ಆ ಆಸ್ತಿಗಳ ಆಸ್ತಿ ತೆರಿಗೆಯನ್ನು ನಿಗದಿಗೊಳಿಸಲು ಪ್ರಸ್ತಾಪವಿದ್ದು, ಇದರಿಂದಾಗಿ ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯು ಈಗಿರುವ ಪ್ರಮಾಣಕ್ಕಿಂತ ದ್ವಿಗುಣಗೊಳ್ಳುವ ನಿರೀಕ್ಷೆ ಇದೆ. ಇದಲ್ಲದೆ ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ರಸ್ತೆಗಳ ಅಭಿವೃದ್ಧಿ ರಸ್ತೆ ಪಕ್ಕದ ಚರಂಡಿ ನಿರ್ಮಾಣ, ಬೀದಿ ದೀಪ ವ್ಯವಸ್ಥೆ ಈ ಕಾರ್ಯದ ಸಲುವಾಗಿ ಹುಡ್ಕೋ ಸಂಸ್ಥೆಯಿಂದ ರೂ. 100

ಕೋಟಿಗಳನ್ನು ಸಾಲದ ರೂಪದಲ್ಲಿ ಪಡೆದು ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ- ಧಾರವಾಡ ಮಹಾನಗರಪಾಲಿಕೆಗಳಿಗೆ ತಲಾರೂ. 2 ಕೋಟಿಯಂತೆ, ನಗರಸಭೆಗಳಿಗೆ ತಲಾ ರೂ. 1 ಕೋಟಿಯಂತೆ, ಪುರಸಭೆಗಳಿಗೆ ತಲಾ ರೂ. 50 ಲಕ್ಷದಂತೆ, ಪಟ್ಟಣ ಪಂಚಾಯತಿಗಳಿಗೆ ತಲಾ ರೂ. 25 ಲಕ್ಷದಂತೆ ಸಾಲವನ್ನು ಮಂಜೂರು ಮಾಡಲು ಉದ್ದೇಶಿಸಿದೆ.

ರಾಜ್ಯದ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಅಂಬೇಡ್ಕರ್ ಭವನದ ನಿರ್ಮಾಣ.

3346(4389) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ವಿವಿಧ ತಾಲ್ಲೂಕುಗಳಲ್ಲಿ ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಸರ್ಕಾರವು ಹಮ್ಮಿಕೊಂಡಿದೆಯೇ?

2) ಹಾಗಿದಲ್ಲಿ, ಈವರೆಗೆ ಯಾವ ಯಾವ ತಾಲ್ಲೂಕುಗಳಲ್ಲಿನ ಕೇಂದ್ರ ಸ್ಥಾನದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು).

3) ಅಂಬೇಡ್ಕರ್ ಭವನದ ಇಲ್ಲದ ತಾಲ್ಲೂಕು ಕೇಂದ್ರಗಳಲ್ಲಿ, ಈ ಭವನಗಳನ್ನು ಕಟ್ಟಲು ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಹಾದಿರಿಸಿರುವ ಅನುದಾನದ ಮೊತ್ತವೆಷ್ಟು?

4) ಮಂಡ್ಯ ತಾಲ್ಲೂಕು ಕೇಂದ್ರದಲ್ಲಿನ ಅಂಬೇಡ್ಕರ್ ಭವನದ ನಿರ್ಮಾಣ ಯಾವ ಹಂತದಲ್ಲಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಮಿನಿ ಅಂಬೇಡ್ಕರ್ ಭವನವನ್ನು 5 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸುವ ಕಾರ್ಯಕ್ರಮವು ಹಾಲಿ ಜಾರಿಯಲ್ಲಿದೆ.

2) ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ನಿರ್ಮಿಸಲಾದ ಮಿನಿ ಅಂಬೇಡ್ಕರ್ ಭವನದ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - 1ರಲ್ಲಿ ಒದಗಿಸಿದೆ.

3) ಮಿನಿ ಅಂಬೇಡ್ಕರ್ ಭವನಗಳನ್ನು ಕಟ್ಟಲು ರೂ.150 ಲಕ್ಷ ರೂ.ಗಳನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಿಕೊಳ್ಳಲಾಗಿದೆ.

4) ಮಂಡ್ಯ ನಗರದಲ್ಲಿ ಮಿನಿ ಅಂಬೇಡ್ಕರ್ ಭವನವನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಈ ಭವನವನ್ನು ದೊಡ್ಡ ಪ್ರಮಾಣದಲ್ಲಿ ನಿರ್ಮಿಸಲು ಜಿಲ್ಲಾ ಪಂಚಾಯತ್ ಹತ್ತು ಲಕ್ಷ ರೂ. ಬಿಡುಗಡೆ ಮಾಡಿದ್ದು, ನಿವೇಶನ ಲಭ್ಯವಿದ್ದು ಭವನದ ಮಾದರಿ ನಕ್ಷೆಯು ಸಿದ್ಧವಿದ್ದು ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ಇವರು ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.